# ದೊಡ್ಡ ಕುಂಡೆಕುಸ್ಕ





ಚಿತ್ರ–ಬರಹ:
**ಶಶಿಧರಸ್ವಾಮಿ ಆರ್. ಹಿರೇಮಠ**

**ಕ**ಪ್ಪು ಬಣ್ಣ ಪ್ರಧಾನವಾಗಿರುವ ಪಕ್ಷಿ. ಬಿಳಿಯ ಎದ್ದು ಕಾಣುವ ಹುಬ್ಬು, ಹೊಟ್ಟೆಯ ಭಾಗ ಅಚ್ಚ ಬಿಳುಪು, ಎದೆ ಮತ್ತು ಬೆನ್ನು ಕಪ್ಪು, ರೆಕ್ಕೆಯ ಮೇಲೆ ಬಿಳಿ ಪಟ್ಟೆ ಹಾರುವಾಗ ಸ್ಪಷ್ಟವಾಗಿ ಕಾಣುತ್ತದೆ. ನೀಳವಾದ ಕಪ್ಪು ಬಾಲ, ಇದರ ಅಂಚು ಬಿಳಿ. ಬಾಲವನ್ನು ಸದಾಕಾಲ ಮೇಲಿಂದ ಕೆಳಗೆ ಕುಣಿಸುತ್ತಿರುತ್ತದೆ. ಅದಕ್ಕಾಗಿಯೇ ಈ ಹಕ್ಕಿಗೆ ಕುಂಡೆಕುಸ್ಕ ಎಂಬ ಹೆಸರು ಬಂದಿದೆ. ಸಣ್ಣದಾದ ಕಪ್ಪು ಕೊಕ್ಕು ಹಾಗೂ ಕಾಲುಗಳಿವೆ.

ಹರಿಯುವ ತಿಳಿ ನೀರಿನ, ನದಿ, ಕೆರೆ ಸನಿಹ ಇರುವ ನುರುಜುಕಲ್ಲು ಮತ್ತು ಬಂಡೆಗಳ ಮೇಲೆ ಕುಳಿತು ಹಾಡುವುದನ್ನು ಈ ಹಕ್ಕಿ ತುಂಬಾ ಇಷ್ಟ ಪಡುತ್ತವೆ. ಸಂಕೋಚ ಸ್ವಭಾವದ ಹಕ್ಕಿಯಲ್ಲ. ಮನೆ ಮಾಳಿಗೆಯ ಮೇಲೆ ಕುಳಿತು ಅಥವಾ ಬಟ್ಟೆ ಒಗೆಯುವ ಸೋಪಾನಘಟ್ಟ ಮುಂತಾದೆಡೆ ನಿರಾತಂಕವಾಗಿ ಹುಳು ಹುಪ್ಪಡಿಗಳನ್ನು ಹುಡುಕಿ ಮೇಯುತ್ತಿರುತ್ತದೆ. ಆಗಾಗ ಮಾನವ ವಸತಿಗಳೆಡೆ ಬರುವ ರೂಢಿಯೂ ಹೊಂದಿದೆ.

ಇದರ ಧ್ವನಿಯು ಮೋಹಕ ಶಿಳ್ಳೆ ಸ್ವರಗಳಿಂದ ಕೂಡಿದೆ. ಸಂತಾನಾಶ್ರಯ ಸಮಯದಲ್ಲಿ ಗಂಡು ಹಕ್ಕಿ ಬಂಡೆ ಅಥವಾ ಮನೆ ಮಾಡುಗಳ ಮೇಲೆ ಕುಳಿತು ಸುಶ್ರಾವ್ಯವಾಗಿ ಹಾಡುತ್ತದೆ. ಇದು ಸ್ಥಳೀಯ ಹಕ್ಕಿಯಾಗಿದ್ದು ವಲಸೆ ಹೋಗುವುದಿಲ್ಲ. ಅಸ್ಸಾಂ ಒಂದನ್ನು ಬಿಟ್ಟು ಭಾರತ, ಪಾಕಿಸ್ತಾನ, ಬರ್ಮಾ, ಬಾಂಗ್ಲಾದೇಶಗಳಲ್ಲಿ ಕಾಣಸಿಗುತ್ತವೆ. ಚಿಕ್ಕ ಕೀಟಗಳು ಮತ್ತು ನದಿ, ಕೆರೆ, ದಡದಲ್ಲಿರುವ ತೆಳು ನೀರಿನ ಜಲಚರ ಇದರ ಆಹಾರ.

ಮಾರ್ಚ್‌ನಿಂದ ಸೆಪ್ಟೆಂಬರ್ ತಿಂಗಳವರೆಗೆ ಗೋಡೆ ಬಿರುಕಿನಲ್ಲಿ, ಹೊರಚಾಚಿರುವ ಬಂಡೆಯಡಿ, ಸೇತುವೆಯ ಸರಕಟ್ಟುಗಳಡಿ ಸಣ್ಣ ಬೇರು, ಕೂದಲು, ತಳಕ್ಕೆ ಉಣ್ಣೆ ಮತ್ತು ಒಣ ಶೈವಲಗಳ ಹಾಸನ್ನು ಹಾಕಿ ಬಟ್ಟಲಿನಾಕಾರದ ಗೂಡನ್ನು ರಚಿಸುತ್ತದೆ. ಕಂದು ವರ್ಣದ ಅನೇಕ ಅಂತರದ ಗೆರೆ ಮತ್ತು ಮಚ್ಚೆಗಳಿರುವ ಬೂದು, ಕಂದು ಅಥವಾ ಹಸಿರು ಮಿಶ್ರಿತ ಬಿಳಿಪಿನ 3 ರಿಂದ 4 ಮೊಟ್ಟೆಗಳನ್ನಿಟ್ಟು ಮರಿ ಮಾಡುತ್ತದೆ.

ದೊಡ್ಡ ಕುಂಡೆಕುಸ್ಕಗಳನ್ನು ಕರಿ ಕುಂಡೆಕುಸ್ಕ, ಕಪ್ಪು–ಬಿಳಿ ಸಿಪಿಲೆ ಎಂದು ಕೆರೆದು ಆಂಗ್ಲಭಾಷೆಯಲ್ಲಿ ಲಾರ್ಜ್ ಪೈಡ್ ವ್ಯಾಗಟೇಲ್ **(large pied wagtail)** ಅಥವಾ ವೈಟ್ ಬ್ರೋಡ್ ವ್ಯಾಗಟೇಲ್ ಎಂದು ಕರೆಯುತ್ತಾರೆ. ವೈಜ್ಞಾನಿಕವಾಗಿ ಮೊಟಾಸಿಲ್ಲಾ ಮದರಸ್ಪಟೆನ್ಸಿಸ್ ಎಂದು ಹೆಸರಿಸಿ ಪಾಸ್ಸರಿಫಾರ್ಮಿಸ್ ಗಣದ ಮೊಟಾಸಿಲ್ಲಿಡೇ ಕುಟುಂಬಕ್ಕೆ ಸೇರಿಸಿದ್ದಾರೆ.